ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಪಾಟೀ ಸವಾಲು 1 ಮತ್ತು 4 ನೇ ಎದುರುದಾರರ ಪರ ಶ್ರೀ ಕೆ.ಎಂ.ಜೆ ವಕೀಲರಿಂದಃ

2 ನೇ ಅರ್ಜಿದಾರರು ನನ್ನ ಮಾವನ ಮಗ. ಆತ ನಮ್ಮ ಊರಿನವನೆ. 1 ನೇ ಎದುರುದಾರರು ನಮ್ಮ ವಿರುದ್ಧ ಯಾವ ಕಾರಣಕ್ಕಾಗಿ ದಾವೆ ದಾಖಲಿಸಿದ್ದರು ಎಂದು ನನಗೆ ಗೊತ್ತಿದೆ. ಸದರಿ ದಾವೆಯಲ್ಲಿ ನನ್ನ ತಂದೆಯೂ ಸಹ ಪಕ್ಷಗಾರರು ಎನ್ನುವುದು ನಿಜ. ಸದರಿ ದಾವೆಯಲ್ಲಿ ನನ್ನ ತಂದೆ ಪಕ್ಷಗಾರರಾಗಿದ್ದು, ನಂತರ ಸುಮಾರು 8 ವರ್ಷಗಳ ಹಿಂದೆ ಪೌತಿಯಾಗಿರುತ್ತಾರೆ. ನಿಮ್ಮ ತಂದೆ ಪೌತಿಯಾದ ನಂತರ ಅವರ ವಾರಸುದಾರರಾದ ನಿಮ್ಮನ್ನು ಹಾಗೂ ನಿಮ್ಮ ಅಣ್ಣ ತಮ್ಮಂದಿರನ್ನು ಹಾಗೂ ಅಕ್ಕ ತಂಗಿಯರನ್ನು ಪಾರ್ಟಿ ಮಾಡಿ ನಿಮಗೆ ನೋಟಿಸ್ ನೀಡಲಾಗಿತ್ತು? ಎಂದರೆ ಸಾಕ್ಷಿಯು ನಮಗೆ ನೋಟಿಸ್ ಜಾರಿಯಾಗಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ನಾವು 3 ಜನ ಗಂಡು ಮಕ್ಕಳು ಸಿದ್ದಯ್ಯ, ಶಿವಲಿಂಗಯ್ಯ ಹಾಗೂ ಖಾಸಯ್ಯ. ನನ್ನ ಅಕ್ಕ ತಂಗಿಯರು ಗೌರಮ್ಮ, ದೇವಮ್ಮ ಹಾಗೂ ಪಾರ್ವತಮ್ಮ. ಪ್ರಸ್ತುತ ಪ್ರಕರಣದಲ್ಲಿ ನಿಮ್ಮ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರು ಸೇರಿಲ್ಲ ಎಂದರೆ ಸಾಕ್ಷಿಯು ಅವರು ನನಗೆ ಈ ಪ್ರಕರಣವನ್ನು ದಾಖಲಿಸುವಂತೆ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಈ ಕುರಿತು ನನ್ನ ಹೆಸರಿಗೆ ಲಿಖಿತವಾಗಿ ಅಧಿಕಾರ ಪತ್ರವನ್ನು ಕೊಟ್ಟಿಲ್ಲ. ಈ ಪ್ರಕರಣವನ್ನು ನಡೆಸುವಂತೆ 2 ನೇ ಅರ್ಜಿದಾರರು ನನಗೆ ಲಿಖಿತವಾಗಿ ಅಧಿಕಾರ ನೀಡಿಲ್ಲ.

2. ಅಸಲು ದಾವಾ ಸಂಖ್ಯೆ 121/2014 ರಲ್ಲಿ ನನಗೆ ನೋಟಿಸ್

ಜಾರಿಯಾಗಿರಲಿಲ್ಲ. 2 ನೇ ಅರ್ಜಿದಾರರಿಗೆ ಹಾಗೂ ನನ್ನ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರಿಗೆ ಸದರಿ ದಾವೆಯಲ್ಲಿನ ನೋಟಿಸ್ ಜಾರಿಯಾಗಿತ್ತೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಅರ್ಜಿದಾರರು ಸದರಿ ದಾವೆಯಲ್ಲಿ ಹಾಜರಾಗುತ್ತಿದ್ದರು ಎಂದರೆ ಸಾಕ್ಷಿಯು ಸುಮಾರು 2-3 ತಿಂಗಳು ಬರುತ್ತಿದ್ದು ಆ ನಂತರ ಅನಾರೋಗ್ಯದ ನಿಮಿತ್ತ ಆತ ಬರುತ್ತಿರಲಿಲ್ಲ, ನಾನು ಹಾಜರಾಗುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಹೆಂಡತಿ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎನ್ನುವುದು ನಿಜ. ಸದರಿ ದಾವೆಯಲ್ಲಿನ ನೋಟಿಸ್ ಬಂದಾಗ ನಾನು ಹಾಗೂ ನನ್ನ ಹೆಂಡತಿ ಮನೆಯಲ್ಲಿದ್ದೆವು ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.